## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ.

## ಸಿ. ಸಿ. ನಂಃ 324/2012

**ಫಿರ್ಯಾದುದಾರರು**
ಸರಕಾರದ ಪರವಾಗಿ
ಅರಣ್ಯ ಇಲಾಖೆ

**ಆರೋಪಿತರು**
ರಾಮಾ ಶಾಬಾ ಮಿರಾಶಿ ಹಾಗೂ ಇತರರು

### ದೋಷಾರೋಪಣೆ

ನಾನು ಶ್ರೀ ವೇದಮೂರ್ತಿ ಬಿ ಎಸ್, ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಅಂದರೆ ಃ

೧. ರಾಮಾ ಶಾಬಾ ಮಿರಾಶಿ,
ವಾಸ ಃ ಹನೋಲಿ, ತಾ ಃ ಜೋಯಡಾ
೨. ಅಲ್ಬನ್ ಬೇಜ್ಮಿ ಗೋಮ್ಸ
ವಾಸ ಃ ನಂದಿಗದ್ದೆ, ತಾ ಃ ಜೋಯಡಾ
೩. ವಿಲ್ಸನ್ ಡುಮಿಂಗ್ ಪರೇರಾ
ವಾಸ ಃ ನಂದಿಗದ್ದೆ , ತಾ ಃ ಜೋಯಡಾ
೪. ಸಿಮಾಂವ್ ಜಾಕಿ ಫರ್ನಾಂಡಿಸ್
ವಾಸ ಃ ಗುಂದ , ಜನತಾ ಕಾಲೋನಿ
ಜೋಯಡಾ ತಾಲೂಕು
೫. ಮನ್‌ವಲ್ ಅಲಿಯಾಸ ಫರ್ನಾಂಡಿಸ್
ವಾಸ ಃ ವಾಸ ಃ ಗುಂದ
ಜೋಯಡಾ ತಾಲೂಕು
೬. ಥಾಮಸ್ ಡಿಕೋಸ್ಟಾ, ವಾಸ ಃ ಗೋಟೆಗಾಳಿ

ಮಾಡುವ ದೋಷಾರೋಪಣೆ ಇಂತಿದೆ ಃ

ದಿನಾಂಕ 25-09-2010 ರಂದು ಸುಮಾರು ೧೧-೦೦ ಗಂಟೆ ಸಮಯದಲ್ಲಿ ಗುಂದ ವಲಯದ ಹನೋಲಿ ಗ್ರಾಮದ ಜನತಾ ಪ್ಲಾಟಿನ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಪ್ರವೇಶಿಸಿ ಕಳ್ಳತನದಿಂದ ಕಾಡುಕೋಣ (Gaur (Bos Gaurus)) ವನ್ನು ಬೇಟೆಯಾಡಿ ವನ್ಯ ಜೀವಿ ಸಂರಕ್ಷಣಾ ಕಾಯ್ದೆಯ ಕಲಂ 51 (1C) ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಮುಂದುವರೆದು ಸದರಿ ಕಾಡು ಕೋಣದ ಮಾಂಸವನ್ನು ಅಲ್ಲಿಂದ ಕಳ್ಳತನ ಮಾಡಿಕೊಂಡು ಹೋಗಿ ಭಾ ದಂ ಸಂಹಿತೆ ಕಲಂ ೩೭೯ ರ ಅಡಿಯಲ್ಲಿ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲಿನ ಅಪರಾಧಗಳನ್ನು ಈ ನ್ಯಾಯಾಲಯವು ನಿಮ್ಮ ವಿರುದ್ಧ ವಿಚಾರಣೆಗೆ ಕೈಗೊಳ್ಳುತ್ತದೆ ಅಂತಾ ನಾನು ಈ ಮೂಲಕ ನಿಮಗೆ ನಿರ್ದೇಶನ ನೀಡಿರುತ್ತೇನೆ.

ದಾಂಡೇಲಿ — ಪ್ರ. ದ. ನ್ಯಾ. ದಂಡಾಧಿಕಾರಿಗಳು,

ದಿನಾಂಕ : - –2014 — ದಾಂಡೇಲಿ